**ಪಾಠ-13** **ಸೆಪ್ಟೆಂಬರ್ 18-24**

# ಅಂತಿಮ ವಿಶ್ರಾಂತಿ



**ಸಬ್ಬತ್ತಿನ ಮಧ್ಯಾಹ್ನ : ಈ ವಾರದ ಅಧ್ಯಯನಕ್ಕಾಗಿ ಓದಿರಿ :** ಪ್ರಕ 1:9–19, ಮತ್ತಾಯ 24:4–8, 23–31, ಪ್ರಕ 14:6–12, ಇಬ್ರಿಯ 11:13–16, ಫಿಲಿಪ್ಪಿ 4:4–6.

**ಸ್ಮರಣವಾಕ್ಯ : "ಆದರೆ ಬರೆದಿರುವ ಪ್ರಕಾರ: 'ದೇವರು ತನ್ನನ್ನು ಪ್ರೀತಿಸುವವರಿಗಾಗಿ ಸಿದ್ಧಮಾಡಿರುವಂಥದೆಲ್ಲವನ್ನು ಕಣ್ಣು ಕಾಣಲಿಲ್ಲ, ಕಿವಿ ಕೇಳಲಿಲ್ಲ. ಅದರ ಭಾವನೆಯು ಮನುಷ್ಯನ ಹೃದಯದಲ್ಲಿ ಹುಟ್ಟಲಿಲ್ಲ"** (1 ಕೊರಿಂಥ 2:9).

ನಿಮಗೆ ಯಾವಾಗಲಾದರೂ ಮಹಾಯುದ್ಧದಲ್ಲಿ ಸಿಲುಕಿ ಹಾಕಿಕೊಂಡಿದ್ದೇನೆಂದು ಅನ್ನಿಸಿದಿಯೆ, ಅಂದರೆ ಒಳತಿಗೂ ಕೆಡುಕಿಗೂ ನಡೆಯುತ್ತಿರುವ ಒಂದು ರೀತಿಯ ಹೋರಾಟದಲ್ಲಿ ಸಿಲುಕಿರುವಿರಾ? ಅನೇಕರು ಮಾತ್ರವಲ್ಲದೆ ಜಾತಿ ಧರ್ಮ ಸಂಪ್ರದಾಯಗಳನ್ನು ನೋಡದ ಜನರಿಗೂ ಸಹಾ ಈ ವಾಸ್ತವತೆಯ ಅರಿವಾಗಿರುತ್ತದೆ. ನಮಗೂ ಕೂಡ ಹಾಗೆಯೇ ಅನ್ನಿಸುತ್ತದೆ. ಯಾಕೆಂದರೆ ಅದು ಖಂಡಿತವಾಗಿಯೂ ಸತ್ಯವಾದ ವಿಷಯವಾಗಿದೆ. ನಾವು ಒಳ್ಳೆಯದಕ್ಕೂ ಕೆಟ್ಟದಕ್ಕೂ ಯೇಸುಕ್ರಿಸ್ತನಿಗೂ ಸೈತಾನನಿಗೂ ನಡುವೆ ನಡೆಯುತ್ತಿರುವ ಮಹಾಯುದ್ಧದಲ್ಲಿ ಹೋರಾಡುತ್ತಿದ್ದೇವೆ.

ಅಂದಮೇಲೆ ನಮ್ಮ ಜೀವನವು ಎರಡು ರೀತಿಯ ಮಟ್ಟದಲ್ಲಿ ಆಡುತ್ತಿರುವಂಥದ್ದಾಗಿದೆ. ಯೇಸುಕ್ರಿಸ್ತನ ಮತ್ತು ಸೈತಾನನ ನಡುವೆ ಇರುವ ಮಹಾಹೋರಾಟ (ವಿರಸ) ಜಾಗತಿಕಮಟ್ಟದಲ್ಲಿ ಹೇಳಬೇಕೆಂದರೆ ಬಾಹ್ಯಾಕಾಶದ ಮಟ್ಟದಲ್ಲಿಯೂ ನಡೆಯುತ್ತಿದೆ, ಯಾಕೆಂದರೆ ಇದು ಆರಂಭವಾದುದೇ ಪರಲೋಕದಲ್ಲಿ

* ಈ ಪಾಠವನ್ನು ಸೆಪ್ಟೆಂಬರ್ 25ರ ಸಬ್ಬತ್ತಿಗೆ ಅಧ್ಯಯನ ಮಾಡಿ ಸಿದ್ಧಪಡಿಸಿಕೊಳ್ಳಿರಿ.

(ಪ್ರಕ 12:7). ನಾವು ಎಲ್ಲಾ ಘಟನೆಗಳ ಗಲಿಬಿಲಿಯಲ್ಲಿ, ದೇವರು ಈ ಲೋಕದಿಂದ ಪಾರು ಮಾಡುವವರಕ್ಷಣೆ ಯೋಜನೆಯ ದೊಡ್ಡ ಚಿತ್ರದ ಮೇಲಿನ ದೃಷ್ಟಿಯನ್ನೇ ಕಳೆದುಕೊಂಡು ಬಿಡುತ್ತೇವೆ. ಯುದ್ಧಗಳು, ರಾಜಕೀಯ ಕಲಹ ಮತ್ತು ಪ್ರಾಕೃತಿಕ ವಿಕೋಪಗಳು ನಮ್ಮನ್ನು ಭಯ ಹುಟ್ಟಿಸುವ ಅಸಹಾಯ ಸ್ಥಿತಿಯಲ್ಲಿ ಹಿಡಿದುಕೊಂಡಿದೆ. ಆದರೆ ದೇವರು ಕೊಡುವ ಪ್ರವಾದನೆಯ ಮಾರ್ಗಸೂಚಿಯಿಂದ ನಾವು ಎಲ್ಲಿಗೆ ಹೋಗಬೇಕು, ಹೇಗೆ ಹೋಗಬೇಕು ಎಂಬುದರ ಯಥಾದೃಷ್ಟಿ ಪಡೆಯಲು ಸಹಾಯ ಮಾಡುತ್ತದೆ.

ಮಹಾಹೋರಾಟದಲ್ಲಿ ನಾವು ವೈಯಕ್ತಿಕವಾಗಿಯೂ ಸಹ ಭಾಗವಹಿಸ–ಬೇಕಾಗುತ್ತದೆ. ನಾವು ನಮ್ಮ ದೈನಂದಿನ ಜೀವಿತದಲ್ಲಿ ನಮ್ಮ ನಂಬಿಕೆಗೆ ಬರುವ ಸವಾಲುಗಳನ್ನು ಎದುರುಸುತ್ತೇವೆ, ನಾವು ಯೇಸುಕ್ರಿಸ್ತನ ಎರಡನೇ ಬರೋಣಕ್ಕೆ ಮೊದಲೆ ಸತ್ತರೆ ಸಾವನ್ನೂ ಸಹಾ ಎದುರಿಸಿರುತ್ತೇವೆ. ಈ ವಾರ ಇಡೀ ಜಗತ್ತು ಕ್ಷೋಬೆಯಲ್ಲಿ ಮುಳುಗಿರುವಾಗ ನಾವು ಕ್ರಿಸ್ತನಲ್ಲಿ ಹೇಗೆ ವಿಶ್ರಾಂತಿ ಪಡೆಯಬಹುದು, ನಮಗೆ ಗೊತ್ತಿಲ್ಲದ ನಮ್ಮ ಭವಿಷ್ಯದಲ್ಲಿ ಭದ್ರತೆಯನ್ನು, ಕನಿಷ್ಟ ಅಲ್ಪಾವಧಿಗಾದರೂ ಹೇಗೆ ಪಡೆಯುವುದು ಎಂಬುದರ ಬಗ್ಗೆ ಗಮನ ಹರಿಸುತ್ತೇವೆ. ಖಂಡಿತವಾಗಿ ದೀರ್ಘಾವಧಿಯಲ್ಲಿ ಎಲ್ಲವೂ ಭರವಸದಾಯಕವಾಗಿರುತ್ತವೆ!

**ಭಾನುವಾರ** **ಸೆಪ್ಟೆಂಬರ್ 19**

## ಅಂತ್ಯದ ಒಂದು ದರ್ಶನ

ಯೇಸುಕ್ರಿಸ್ತನ ಪ್ರಿಯಶಿಷ್ಯನಾಗಿದ್ದ ಯೋಹಾನನು ವಯಸ್ಸು ಕಳೆದ ಮುದುಕನಾಗಿ ಉಳಿದು ಪತ್ಮೋಸ್ ದ್ವೀಪದಲ್ಲಿ ತನ್ನ ಬಂಧುಬಾಂಧವರಿಂದ ದೂರಾಗಿ ಕ್ರಿಸ್ತನೊಂದಿಗೆ ಇರುವವನಾಗಿದ್ದಾನೆ. ಈ ನಿರ್ಜನವಾದ ದ್ವೀಪದಲ್ಲಿ ತಾನೊಬ್ಬನೇ ಇರುವಾಗ ಅವನ ಮನಸ್ಸಿನಲ್ಲಿ ಏನನ್ನು ಆಲೋಚಿಸುತ್ತಿರಬಹುದು? ಅಲ್ಲಿ ಆತನ ಜೀವನ ಹೇಗೆ ಕೊನೆ ಮುಟ್ಟಿತು?

ಹೌದು, ಆತನು ಅವಶ್ಯಕವಾಗಿ ಯೇಸುವು ಈ ಭೂಮಿಯಿಂದ ಎತ್ತಲ್ಪಡುವಾಗ ಇಬ್ಬರು ದೇವದೂತರು ನಿಂತು ಹೀಗೆ ಹೇಳುವುದನ್ನು ಕೇಳಿದ್ದನು "ಗಲಿಲಾಯದವರೇ, ನೀವು ಯಾಕೆ ಆಕಾಶದ ಕಡೆಗೆ ನೋಡುತ್ತಾ ನಿಂತಿದ್ದೀರಿ? ನಿಮ್ಮ ಬಳಿಯಿಂದ ಆಕಾಶಕ್ಕೆ ಸೇರಿಸಲ್ಪಟ್ಟಿರುವ ಈ ಯೇಸು ಯಾವ ರೀತಿಯಲ್ಲಿ ಆಕಾಶದೊಳಕ್ಕೆ

ಹೋಗಿರುವುದನ್ನು ಕಂಡಿರೋ ಅದೇ ರೀತಿಯಲ್ಲಿ ಬರುವನು ಎಂದರು" (ಅ.ಕೃ. 1:11).

ಅದು ನಡೆದು ವರ್ಷಗಳೇ ಸಂಧುಹೋಗಿವೆ, ಆದರೆ ಕ್ರಿಸ್ತನು ಮಾತ್ರ ಹಿಂದಿರುಗಲಿಲ್ಲ. ಈ ನಡುವೆ ಇತರ ಅಪೋಸ್ತಲರೆಲ್ಲರೂ ಕ್ರಿಸ್ತನಿಗೆ ರಕ್ತ ಸಾಕ್ಷಿಗಳಾಗಿ ಕೊಲ್ಲಲ್ಪಟ್ಟಿದ್ದಾರೆ. ಯೌವನಾವಸ್ಥೆಯಲ್ಲಿದ್ದ ಸಭೆಯು ಒಂದು ಪೀಳಿಗೆಯ ಬದಲಾವಣೆಗೆ ಒಳಗಾಗಿದೆ ಈವಾಗ ಅದು ಭಯಂಕರವಾದ ಹಿಂಸೆಯನ್ನು ಹೊರಗಿನವರಿಂದ ಅನುಭವಿಸುತ್ತಿದೆ, ಒಳಗಿನವರಲ್ಲಿ ನಾಸ್ತಿಕ ಆಂದೋಲನವಾಗುತ್ತಿದೆ. ಯೋಹಾನನು ಒಂಟಿತನ, ದಣಿವು, ಅವಿಶ್ರಾಂತಿಯನ್ನು ಅನುಭವಿಸುತ್ತಿದ್ದಾನೆ.

ಇಂತಹ ಸಂದರ್ಭದಲ್ಲಿ ಕೂಡಲೇ ಅವನಿಗೆ ಒಂದು ದರ್ಶನ ಕೊಡಲ್ಪಡುತ್ತದೆ. ಯಾವ ಆದರಣೆ ಯೋಹಾನನಿಗೆ ಈ ದರ್ಶನದಿಂದ ಸಿಕ್ಕಿದೆ ಎಂದು ನೀವು ಕಲ್ಪನೆ ಮಾಡಿಕೊಳ್ಳುತ್ತೀರಿ? ಪ್ರಕಟನೆ 1:9–19ನ್ನು ಓದಿರಿ.

ಯೇಸುಕ್ರಿಸ್ತನು ತನ್ನ ಶಿಷ್ಯರಿಗೆ "ನೋಡಿರಿ, ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡವಿರುತ್ತೇನೆ ಎಂದು ಹೇಳಿದನು" (ಮತ್ತಾಯ 28:20). ನಿಸ್ಸಂದೇಹವಾಗಿ ಯೋಹಾನನಿಗೆ ಈ ಮಾತುಗಳಿಂದ ಗಡಿಪಾರಾಗಿ ತಾನೊಬ್ಬನೇ ಇರುವಾಗ ಧೈರ್ಯ ತಂದುಕೊಂಡಿದ್ದಾನೆ. ನಿಶ್ಚಯವಾಗಿ ಈ ದರ್ಶನದಿಂದ ಯೇಸುಕ್ರಿಸ್ತನು ನೀಡಿದ ಪ್ರಕಟನೆಯಿಂದ ಆತನಿಗೆ ದೊಡ್ಡ ಆದರಣೆ ಉಂಟಾಗಿರುತ್ತದೆ.

ಈ ವಚನಗಳ ನಂತರ ಈ ಲೋಕದ ಭವಿಷ್ಯದ ಬಗ್ಗೆ ಆತನಿಗೆ ಆಗುವ ದರ್ಶನಗಳನ್ನು ನೋಡುತ್ತೇವೆ. ಒಂದು ವಿಸ್ಮಯಕರವಾದ ಚರಿತ್ರೆಯ ದೃಶ್ಯವು ಅವನ ಮುಂದೆ ಚಿತ್ರಿತಗೊಂಡಿತು, ಮೂಲತಃ ಇದು ನಮಗೆ ಸಭೆಯ ಚರಿತ್ರೆಯಾದರೆ ಅವನಿಗೆ ಸಭೆಯು ಭವಿಷ್ಯವಾಗಿತ್ತು. ಸಭೆ ಅನುಭವಿಸುವ ಎಲ್ಲಾ ಹಿಂಸೆ ಶೋಧನೆಗಳ ಜೊತೆಗೆ ಅಂತ್ಯ ಹೇಗಾಗುತ್ತದೆ ಎಂಬುದು ಯೋಹಾನನಿಗೆ ತೋರಿಸಲ್ಪಟ್ಟಿತು.

"ತರುವಾಯ ನೂತನಾಕಾಶಮಂಡಲವನ್ನೂ ನೂತನ ಭೂಮಂಡಲವನ್ನೂ ಕಂಡೆನು. ಮೊದಲಿದ್ದ ಆಕಾಶಮಂಡಲವೂ ಮೊದಲಿದ್ದ ಭೂಮಂಡಲವೂ ಇಲ್ಲದೆ ಹೋದವು; ಇನ್ನು ಸಮುದ್ರವೂ ಇಲ್ಲ. ಇದಲ್ಲದೆ ಪರಿಶುದ್ಧ ಪಟ್ಟಣವಾದ ಹೊಸ ಯೆರೂಸಲೇಮು ಪರಲೋಕದಿಂದ ದೇವರ ಬಳಿಯಿಂದ ಇಳಿದು ಬರುವುದನ್ನು

ಕಂಡೆನು; ಅದು ತನ್ನ ಗಂಡನಿಗೋಸ್ಕರ ಅಲಂಕೃತಳಾದ ಮದಲಗಿತ್ತಿಯಂತೆ ಶೃಂಗರಿಸಲ್ಪಟ್ಟಿತ್ತು" (ಪ್ರಕ 21:1,2).

ಯೋಹಾನನು ಪ್ರಕಟನೆ ಪುಸ್ತಕದಲ್ಲಿ ದಾಖಲಿಸಿರುವ ಮಹಾವಿನಾಶದ ದರ್ಶನವು ಆತನಿಗೆ ದೇವರ ಏರ್ಪಾಟುಗಳಲ್ಲಿ ಮತ್ತು ವಾಗ್ದಾನಗಳಲ್ಲಿ ವಿಶ್ವಾಸ ಹೊಂದಲು ಸಹಾಯ ಮಾಡಿತು.

ಈವಾಗ ಜೀವನವು ಕಠಿಣಕರವಾಗಿದೆ. ಮಾತ್ರವಲ್ಲದೆ ಕೆಲವು ಸಮಯಗಳಲ್ಲಿ ಭಯ ಹುಟ್ಟಿಸುವಂಥದ್ದಾಗಿದೆ. ಆದಾಗ್ಯೂ ದೇವರು ಭವಿಷ್ಯವನ್ನು ಬಲ್ಲನು ಮತ್ತು ದೀರ್ಘಾವಧಿಯ ಭವಿಷ್ಯವು ಒಳ್ಳೆಯದಾಗಿರುತ್ತದೆ ಎಂಬ ತಿಳುವಳಿಕೆಯು ನಮಗೆ ಆದರಣೆಯನ್ನು ನೀಡುತ್ತದೆ ಹೇಗೆ?

**ಸೋಮವಾರ** **ಸೆಪ್ಟೆಂಬರ್ 20**

## ಹಿಂದೆಣಿಕೆ (ಅವರೋಹಣ ಎಣಿಕೆ)

ಅದು ಯಾವಾಗ ಆಗುವುದು? ನೀನು ಪ್ರತ್ಯಕ್ಷವಾಗುವುದಕ್ಕೂ ಯುಗದ ಸಮಾಪ್ತಿಗೂ ಸೂಚನೆಯೇನು?

ಶಿಷ್ಯರು ಕೇಳಿದ ಪ್ರಶ್ನೆಗೆ ಎಣ್ಣೆ ಮರಗಳ ಗುಡ್ಡದ ಮೇಲೆ ಯೇಸುಕ್ರಿಸ್ತನು ಚರಿತ್ರೆಯನ್ನು ಸವಿಸ್ತರವಾಗಿ ಚಿತ್ರಿಸಿದನು.

ಯೇಸುಕ್ರಿಸ್ತನ ಪ್ರಸಿದ್ಧ ಪ್ರಸಂಗವು ಮತ್ತಾಯ 24ನೇ ಅಧ್ಯಾಯದಲ್ಲಿ ದಾಖಲಾಗಿದೆ, ಇದು ತನ್ನ ದಿನಗಳಿಂದ ಹಿಡಿದುಕೊಂಡು ತನ್ನ ಎರಡನೇ ಬರೋಣದವರೆಗಿನ ಮತ್ತು ಅದರಾಚೆಯ ನಿರಂತರವಾದ ಚಾರಿತ್ರಿಕ ಕಾಲವನ್ನು ಒಳಗೊಂಡಿದೆ.

ಎಲ್ಲಾ ಕಾಲದಲ್ಲಿ ಜೀವಿಸುವ ತನ್ನ ಜನರಿಗೋಸ್ಕರ ಯೇಸುಕ್ರಿಸ್ತನು ಅಂತ್ಯಕಾಲದ ಪ್ರವಾದನೆಗಳ ದೈವೀಕ ವೇಳಪಟ್ಟಿಯನ್ನು ಸ್ಥೂಲವಾಗಿ ಚಿತ್ರಿಸಿದ್ದಾನೆ, ಇದರಿಂದ ಅಂತ್ಯಕಾಲದಲ್ಲಿ ಜೀವಿಸುತ್ತಿರುವ ನಾವು ಅಂತಿಮ ಘಟನೆಗೆ ಸಿದ್ಧಪಡಿಸಿಕೊಳ್ಳಲು ಸಾಧ್ಯವಾಗಿದೆ.

ನಮ್ಮ ಸುತ್ತಲಿರುವುದೆಲ್ಲಾ ಪತನವಾಗುವಾಗಲೂ ನಾವು ಆತನ ಪ್ರೀತಿಯಲ್ಲಿ ವಿಶ್ವಾಸಪೂರ್ಣವಾಗಿ ವಿಶ್ರಾಂತಿಯಲ್ಲಿ ನೆಲೆಗೊಂಡಿರಬೇಕೆಂಬುದು ಆತನ ಬಯಕೆಯಾಗಿದೆ.

ದಾನಿಯೇಲನು ವಿವರಿಸಿರುವ ಇದುವರೆಗೆ ಸಂಭವಿಸದಂಥ ಮಹಾಸಂಕಟ ಕಾಲದ ಬಗ್ಗೆ (ದಾನಿ 12:1) ಅಡ್ವೆಂಟಿಸ್ಟರಿಗೆ ಚೆನ್ನಾಗಿ ಗೊತ್ತಿದೆ. ಯೇಸುಕ್ರಿಸ್ತನು ತನ್ನ ಬರೋಣಕ್ಕೆ ಮುಂಚಿತವಾಗಿ ಸಂಭವಿಸುವ ಈ ಘಟನೆಗಳನ್ನು ಎದುರಿಸಲು ನಾವು ಸಿದ್ಧರಾಗಿರಬೇಕೆಂದು ಬಯಸುತ್ತಾನೆ.

ಆತನ ಬರೋಣವು ಹೇಗಿರುತ್ತದೆ? ನಾವು ಮೋಸ ಹೋಗುವುದನ್ನು ಹೇಗೆ ತಪ್ಪಿಸಿಕೊಳ್ಳಬಹುದು? ಮತ್ತಾಯ 24:4–8, 23–31ನ್ನು ಓದಿರಿ.

ಪ್ರವಾದಿಯಲ್ಲಿ ಆತನ ಬರೋಣದ ಬಗ್ಗೆ ಹೇಳಿರುವುದನ್ನು ಪರಿಗಣಿಸಿದಾಗ ಮತ್ತು ಯೇಸುಕ್ರಿಸ್ತನ ಪ್ರಸಂಗದಲ್ಲಿ ಹೇಳಿರುವಂತೆ ಆತನ ಬರೋಣವು ಅಕ್ಷರಶಃ ಅಂತ್ಯಕಾಲದಲ್ಲಿ ನಡೆಯುವ ನಿಜವಾದ ಘಟನೆಯಾಗಿದೆ.

ಕಳೆದ ಜಾಗತಿಕ ಮಟ್ಟದ ಸಾಂಸ್ಕೃತಿಕ ವಿರೋಪಕ್ಕೆ ಸಿದ್ಧರಾದವರು ಕೇವಲ ಎಂಟು ಮಂದಿ ಮಾತ್ರ. ಯೇಸುಕ್ರಿಸ್ತನು ತನ್ನ ಅನಿರೀಕ್ಷಿತ ಬರೋಣವನ್ನು ಈ ಘಟನೆಗೆ (ಜಲಪ್ರಳಯಕ್ಕೆ) ಹೋಲಿಸಿದ್ದಾನೆ (ಮತ್ತಾಯ 24:37–31). ಆದರೆ ಆತನು ಬರುವ ದಿನವು ಮತ್ತು ಗಳಿಗೆಯ ಯಾರಿಗೂ ಗೊತ್ತಿಲ್ಲ (ಮತ್ತಾಯ 24:36). ನಮ್ಮ ಸುತ್ತಲೂ ಲೋಕದಲ್ಲಿ ನಡೆಯುವುದನ್ನು ನೋಡಿ 'ಹಿಂದೆಣಿಕೆ'. ದೇವರು ನಮಗೆ ಪ್ರವಾದನೆಯನ್ನು ಕೊಟ್ಟಿದ್ದಾನೆ. ಈ ಪ್ರವಾದನೆಯ ಸಂಭವಗಳಲ್ಲಿ ನಾವು ನಿರ್ವಹಿಸಬೇಕಾದ ಪಾತ್ರಗಳು ನಮಗೆ ಕೊಡಲ್ಪಟ್ಟಿದೆ. ನಮ್ಮ ಪಾತ್ರವೇನು? ಮತ್ತಾಯ 24:9–14 ರ ಮೇಲೆ ಗಮನಹರಿಸಿರಿ.

ಈ ಒಂದು ಜಾಗತಿಕ ಮಟ್ಟದ ವಿರಸದಲ್ಲಿ ನಾವು ಕೇವಲ ವೀಕ್ಷಕರಲ್ಲ. ನಾವು ಲೋಕದ ಕಟ್ಟಕಡೆಯವರಿಗೆ ಈ ಸುವಾರ್ತೆಯನ್ನು ಸಾರುವ ಕೆಲಸದಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾಗಿದೆ, ಹಾಗಾಗಿ ನಾವು ಹಿಂಸೆಗೆ ಒಳಗಾಗುತ್ತೇವೆ.

ಕಡೆಯವರಿಗೆ ತಾಳುವುದು ಎಂದರೆ ಏನು ಅರ್ಥಕೊಡುತ್ತದೆ? ನಾವು ಹೇಗೆ ಅದನ್ನು ಮಾಡಬಹುದು? ಅನೇಕರು ಮಾಡಿರುವಂತೆ ಮತ್ತು ಅನೇಕರು ಮಾಡುವಂತೆ ನಾವು ಕೂಡ ಬಿದ್ದುಹೋಗದಂತೆ ಪ್ರತಿದಿನ ಯಾವ ಆಯ್ಕೆಗಳನ್ನು ಮಾಡಿಕೊಳ್ಳಬೇಕಾಗಿದೆ?

**ಮಂಗಳವಾರ** **ಸೆಪ್ಟೆಂಬರ್ 21**

## ಮುನ್ನಡೆಯುವುದಕ್ಕೆ ಆದೇಶ

ಪ್ರವಾದನೆಯ ಯಥಾದೃಷ್ಟಿಯ ಚರಿತ್ರೆಯ ಘಟನೆಗಳು ಬಿಚ್ಚಿಕೊಳ್ಳುತ್ತಿದ್ದ ಹಾಗೆ, ನಾವು ಸುಮ್ಮನೆ ಇರುವುದಕ್ಕೆ ಅವು ಬಿಡುವುದಿಲ್ಲ, ನಿಜವಾಗಿಯೂ ಈ ಘಟನೆಗಳನ್ನು ನಿಯಂತ್ರಿಸಲು ನಮ್ಮಿಂದ ಸಾಧ್ಯವಿಲ್ಲ. ಅಂತಿಮ ಘಟನೆಗಳು ಮುಂತಿಳಿಸಿದಂತೆ ನಡೆಯುತ್ತವೆ. ಅದಕ್ಕೆ ನಾವೇನು ಮಾಡುವುದಕ್ಕಾಗುತ್ತದೆ? ಹೇಳಬೇಕೆಂದರೆ, ಒಬ್ಬೊಂಟಿಯಾದ ನಾನು ಏನು ಮಾಡಬಲ್ಲೆ? ಬಹಳ ಸಲ ಈ ತರದ ಮನೋಭಾವ ನಮ್ಮದಾಗಿರುತ್ತದೆ.

ಆದರೆ ಕ್ರೈಸ್ತರಾದ ನಾವು ನಮ್ಮ ಸುತ್ತಲಿರುವ ಪ್ರಪಂಚದೊಂದಿಗೆ ಈ ತರವಾಗಿ ಹೇಳುವಂತಿಲ್ಲ ವಿಶೇಷವಾಗಿ ಅಂತಿಮ ಘಟನೆಗಳ ವಿಷಯದಲ್ಲಿ ಕೂಡದು. ಪ್ರಕಟನೆಗಳು 14ನೇ ಅಧ್ಯಾಯ ಚರಿತ್ರೆಯ ಈ ಕಾಲಕ್ಕೆ ನಾವು ಯಾವ ಉದ್ದೇಶಕ್ಕೆ ಇದ್ದೇವೆಂದರೆ ದೇವರ ನ್ಯಾಯವಿಚಾರಣೆ ಮತ್ತು ಯೇಸುಕ್ರಿಸ್ತನ ಎರಡನೇ ಬರೋಣದ ಬಗ್ಗೆ ಇತರರಿಗೆ ಹೇಳಿಕೊಡುವುದಕ್ಕೆ ಇದ್ದೇವೆ.

ಪ್ರಕಟನೆ 14ನೇ ಅಧ್ಯಾಯ 6 ರಿಂದ 12ನೇ ವಚನಗಳನ್ನು ಓದಿರಿ. ಇದು ನಮಗೆ ಏನು ಕಲಿಸುತ್ತದೆ, ಮತ್ತು ನಾವು ಲೋಕಕ್ಕೆ ಏನನ್ನು ಸಾರಬೇಕಾಗಿದೆ? ಯಾಕೆ ಈ ಸಂದೇಶವು ಅಷ್ಟು ತುರ್ತಾದದ್ದಾಗಿದೆ?

ಅಡ್ವೆಂಟಿಸ್ಟರಾಗಿ ನಾವು ವರ್ತಮಾನದ ಸತ್ಯಗಳನ್ನು ನಂಬುತ್ತೇವೆ (2 ಪೇತ್ರ 1:12). ನಿರ್ದಿಷ್ಟವಾಗಿ, ಈ ವಚನಗಳನ್ನು ಮೂರು ದೂತರ ಸಂದೇಶ ಎಂಬುದಾಗಿ ಕರೆಯುತ್ತೇವೆ. ಲೋಕದ ಚರಿತ್ರೆಯ ಈ ಕಾಲದಲ್ಲಿ ನಮ್ಮ ಕರೆಯುವಿಕೆಯ ಅವಶ್ಯಕತೆಯನ್ನು ಇಲ್ಲಿ ಕಾಣುತ್ತೇವೆ.

ಈ ಸಂದೇಶವು ನಿತ್ಯವಾದ ಶುಭವರ್ತಮಾನ ಎಂಬ ಪದದಿಂದ ಶುರುವಾಗು–ವುದನ್ನು ಗಮನಿಸಿರಿ. ಯೇಸುಕ್ರಿಸ್ತನ ಮರಣ ಮತ್ತು ಪುನರುತ್ಥಾನದ ವರ್ತಮಾನವು ನಿಜವಾಗಿಯೂ ಅದ್ಭುತಕರವಾದದ್ದು, ಅದರ ಮೇಲೆಯೇ ತಾನೇ ನಮ್ಮ ರಕ್ಷಣೆಯ ನಿರೀಕ್ಷೆ ನೆಲೆಗೊಂಡಿದೆ. ಈ ಸಂದೇಶದಲ್ಲಿ ನ್ಯಾಯವಿಚಾರಣೆಯು ಬಂದದೆ (ಪ್ರಕಟನೆ 14:7) ಎಂಬ ಸಂದೇಶವು ಸಹ ಇದೆ. ಇದು ಅಂತ್ಯಕಾಲವನ್ನು ಸೂಚಿಸುವ ಪ್ರಬಲವಾದ ಮೈಲುಗಲ್ಲಾಗಿದೆ. ಮತ್ತು ಭೂಮ್ಯಾಕಾಶಗಳನ್ನೂ ಸಮುದ್ರವನ್ನೂ

ಉಂಟುಮಾಡಿದಾತನನ್ನು ಆರಾಧಿಸಿರಿ ಎಂಬ ಕೆರೆಯು ಕೊಡಲ್ಪಟ್ಟಿದೆ, ಈ ಭಯ ಪಡಿಸುವ ಎಚ್ಚರಿಕೆಗೆ ಪ್ರತಿಯಾಗಿ ಬ್ಯಾಬಿಲೋನಿನಲ್ಲಿದ್ದುಕೊಂಡು ಮೃಗವನ್ನೂ ಮೃಗದ ಗುರುತನ್ನೂ, ಪೂಜಿಸುವವರಿಗೆ ದೇವರನ್ನು ಆರಾಧಿಸಬೇಕೆಂಬ ಕರೆ ಕೊಡಲ್ಪಟ್ಟಿದೆ. ಅಂತಿಮವಾಗಿ ದೇವರ ಅಂತ್ಯಕಾಲದ ಜನರ ಚಿತ್ರವಿದೆ: ಇದರಲ್ಲಿ ದೇವರಾಜ್ಞೆಗಳನ್ನೂ ಯೇಸುವಿನ ಮೇಲಣ ನಂಬಿಕೆಯನ್ನೂ ಕೈಗೊಂಡು ನಡೆಯುತ್ತಿರುವ ದೇವಜನರ ತಾಳ್ಮೆಯು ತೋರಿಬರುತ್ತದೆ.

ಪ್ರಕಟನೆ 14:11ನ್ನು ಓದಿರಿ. ಮೃಗವನ್ನೂ ಮೃಗದ ವಿಗ್ರಹವನ್ನೂ ಪೂಜಿಸುವುದರ ಅಶಾಂತಿಯ ಬಗ್ಗೆ ಇದು ಏನನ್ನು ಹೇಳುತ್ತದೆ?

ಮೃಗುವನ್ನೂ ಮೃಗದ ಗುರುತನ್ನೂ ಪೂಜಿಸುವವರಿಗೆ ಹಗಲಿರುಳು ಉಪಶಮನ–ವಿರುವುದಿಲ್ಲ ತಾನೆ? ಇದು ಏನು ಅರ್ಥಕೊಡುತ್ತದೆ ಎಂಬುದರ ಬಗ್ಗೆ ನಾನಾ ಆಲೋಚನೆಗಳು ಇದ್ದಾಗ್ಯೂ ಈ ಜನರಿಗೆ, ದೇವರಿಗೆ ನಂಬಿಗಸ್ಥರಾದವರಿಗೆ ಇರುವಂತಹ ವಿಶ್ರಾಂತಿಯ ಅನುಭವವು ಇರುವುದಿಲ್ಲ.

ಮೂರು ದೂತರ ಸಂದೇಶದ ಮೊದಲ ಭಾಗವನ್ನು ನಿತ್ಯವಾದ ಶುಭ ವರ್ತಮಾನವಾಗಿದೆ ಎಂದು ಏಕೆ ಆಲೊಚಿಸುವಿರಿ? ನಾವು ಯಾಕೆ ಈ ಅದ್ಭುತವಾದ ಸತ್ಯವನ್ನು ಯಾವಾಗಲೂ ಲೋಕಕ್ಕೆ ಸಾರುವಾಗ ನಮ್ಮ ಮುಂದಿಟ್ಟುಕೊಳ್ಳಬೇಕು. ವಿಶ್ರಾಂತಿಯ ಪರಿಕಲ್ಪನೆಗೆ ಸುವಾರ್ತೆಯನ್ನು ಅರ್ಥಮಾಡಿಕೊಳ್ಳುವುದು ಬಹಳ ಮುಖ್ಯವಾಗಿದೆ ಹೇಗೆ?

**ಬುಧವಾರ** **ಸೆಪ್ಟೆಂಬರ್ 22**

## ಸಮಾಧಾನದ ವಿಶ್ರಾಂತಿ

ಶತಶತಮಾನಗಳಿಂದಲೂ ಕ್ರೈಸ್ತರು ಯೇಸುಕ್ರಿಸ್ತನ ಬರೋಣವನ್ನು ಕಾದುಕೊಂಡಿದ್ದಾರೆ. ಇದು ನಿಜವಾಗಿಯೂ ನಮ್ಮೆಲ್ಲರ ಪರೀಕ್ಷೆಗೆ ಮುಕ್ತಾಯವಾಗಿದೆ ಮತ್ತು ಕೇವಲ ನಮ್ಮದು ಮಾತ್ರವಲ್ಲ. ಆದರೆ ಚರಿತ್ರೆಯಾದ್ಯಂತ ಇರುವ ದೇವರ ಎಲ್ಲಾ ನಂಬಿಗಸ್ಥರ ನಿರೀಕ್ಷೆಯ ಮುಕ್ತಾಯವಾಗಿದೆ.

ಇಬ್ರಿಯ 11:13–16ರನ್ನು ಓದಿರಿ. ಯಾವ ಮಹಾವಾಗ್ದಾನವು ಇಲ್ಲಿದೆ, ಕೇವಲ ನಮ್ಮ ಪೂರ್ವಿಕರಿಗಲ್ಲ ನಮಗೂ ಅನ್ವಯವಾಗುವ ವಾಗ್ದಾನ?

ಅನೇಕ ರೀತಿಯಲ್ಲಿ ಮರಣದ ಬಗ್ಗೆ ಲೋಕದಲ್ಲಿರುವ ಒಂದು ಸಾಮಾನ್ಯವಾದ ಮತ್ತು ಜನಪ್ರಿಯವಾದ ಅಭಿಪ್ರಾಯವು ನಿಜವಾಗಿದ್ದರೆ ಈ ವಚನಗಳು ಅರ್ಥವನ್ನು ಕಳೆದುಕೊಳ್ಳುತ್ತವೆ. ಈ ಜನರು ವಾಗ್ದಾನಗಳನ್ನು ಪಡೆದುಕೊಳ್ಳದೆ ಹೋದರೆ ಈ ವಚನಗಳು ಯಾವುದರ ಬಗ್ಗೆ ಮಾತನಾಡುತ್ತವೆ? ಅವರೆಲ್ಲರೂ ಮರಣ ಹೊಂದಿದರು, ಹಾಗಿಲ್ಲದಿದ್ದರೆ ಈವಾಗ ಅವರೆಲ್ಲರೂ ತಮಗೆ ಸಿಗುವ ದೊಡ್ಡ ಪ್ರತಿಫಲವನ್ನು ಹೊಂದಿ ಪರಲೋಕದಲ್ಲಿ ಯೇಸುಕ್ರಿಸ್ತನ ಜೊತೆ ಸಂತೋಷ ಪಡುತ್ತಿದ್ದರು. ಉದಾಹರಣೆಗೆ ಉತ್ತರ ಅಮೇರಿಕದ ಪ್ರಸಿದ್ಧ ಸುವಾರ್ತಿಕರಾಗಿದ್ದ ಬಿಲ್ಲಿ ಗ್ರಾಹಾಮ್ ಸತ್ತುಹೋದರು, ಆದರೆ ಜನರು ಅವರು ಈವಾಗ ಯೇಸುಕ್ರಿಸ್ತನ ಜೊತೆ ಪರಲೋಕದಲ್ಲಿದ್ದಾರೆ ಎಂದು ಹೇಳುವುದನ್ನು ಆಗಾಗ್ಗೆ ಕೇಳಿಸಿಕೊಳ್ಳುತ್ತಿರುತ್ತೇವೆ.

ಈ ಅಭಿಪ್ರಾಯದಲ್ಲಿರುವ ಒಂದು ವಿಪರ್ಯಾಸವೇನೆಂದರೆ ಬಹಳ ಸಲ ಯಾರಾದರೂ ಸತ್ತುಹೋದರೆ 'ಅವರ ಆತ್ಮಕ್ಕೆ ಶಾಂತಿ ಸಿಗಲಿ' ಎಂದು ಹೇಳುವುದನ್ನು ಕೇಳಿಸಿಕೊಳ್ಳುತ್ತಿರುತ್ತೇವೆ. ಆದರೆ ಇಲ್ಲಿ ಏನು ನಡೆಯುತ್ತಾ ಇದೆ? ಸತ್ತು ಹೋದಮೇಲೆ ಜನರು ವಿಶ್ರಾಂತಿ ಪಡೆದುಕೊಳ್ಳುತ್ತಾರೆಯೇ ಅಥವಾ ಅವರು ಪರಲೋಕದಲ್ಲಿ ಏನು ಮಾಡಬೇಕಾಗಿದೆಯೋ ಅದನ್ನೆಲ್ಲಾ ಮಾಡುತ್ತಿರುವರೇ ಭೂಮಿಯಲ್ಲಿ ನಡೆಯುತ್ತಿರುವ ಎಲ್ಲಾ ತಮಾಷೆಯನ್ನು ವೀಕ್ಷಿಸುತ್ತಿರುವರೇ?

ಯೇಸುಕ್ರಿಸ್ತನು ಮರಣವನ್ನು ಹೇಗೆ ವಿವರಿಸುತ್ತಾನೆ? ಯೋಹಾನ 11:11.

ನಿಜವಾದ ಸಂಗತಿ ಏನೆಂದರೆ ಸತ್ತವರ ವಿಷಯದಲ್ಲಿ ಜನರು ಆಲೋಚಿಸುವ ವಿಶ್ರಾಂತಿ 'ಚಿರಶಾಂತಿ ಸಿಗಲಿ' ಎಂಬುದು ಖಂಡಿತವಾಗಿಯೂ ಸತ್ತಮೇಲೆ ಮನುಷ್ಯರ ಸ್ಥಿತಿಯ ಬಗ್ಗೆ ಸತ್ಯವಾದ ಮಾತಾಗಿದೆ ಅಲ್ಲವೇ? ಸತ್ತವರು ನಿಜವಾಗಿ ವಿಶ್ರಾಂತಿ–ಯಲ್ಲಿರುತ್ತಾರೆ. "ಒಬ್ಬ ಕ್ರೈಸ್ತ ವಿಶ್ವಾಸಿಗೆ ಸಾವು ಎಂಬುದು ಸಣ್ಣ ವಿಷಯ. ಯೇಸುಕ್ರಿಸ್ತನು ಸಾವು ಕೇವಲ ಅಲ್ಪಕಾಲಿಕವಾದದ್ದು ಎಂಬಂತೆ ಮಾತಾಡುತ್ತಾನೆ.

ಒಬ್ಬನು ನನ್ನ ಮಾತನ್ನು ಕೈಕೊಂಡು ನಡೆದರೆ ಅವನು ಎಂದಿಗೂ ಸಾಯುವುದಿಲ್ಲ ಸಾವಿನ ರುಚಿಯನ್ನು ಅನುಭವಿಸುವುದಿಲ್ಲ ಎಂದು ಹೇಳುತ್ತಾನೆ. ಒಬ್ಬ ಕ್ರೈಸ್ತನಿಗೆ ಸಾವು ಕೇವಲ ನಿದ್ರೆಯಂತೆ ಅಲ್ಪಾವಧಿಯ ಮೌನ ಮತ್ತು ಅಂಧಕಾರವಾಗಿದೆ (ಕತ್ತಲು). ನಮ್ಮ ಜೀವವು ಕ್ರಿಸ್ತನ ಮೂಲಕ ದೇವರಲ್ಲಿ ಬಚ್ಚಿಡಲ್ಪಟ್ಟಿದೆ, 'ನಮಗೆ

ಜೀವವಾಗಿರುವ ಕ್ರಿಸ್ತನು ಕಾಣಿಸಿಕೊಂಡಾಗ ನಾವು ಸಹ ಆತನೊಂದಿಗೆ ಕಾಣಿಸಿಕೊಳ್ಳುತ್ತೇವೆ'. ಯೋಹಾನ 8:51, 52 ಮತ್ತು ಕೊಲಸ್ಸೆ 3:4" – ಶ್ರೀಮತಿ ಎಲೆನ್ ಜಿ ವೈಟಮ್ಮನವರ "ಯುಗಯುಗಳ ಬಯಕೆ" ಎಂಬ ಪುಸ್ತಕದಲ್ಲಿ 787ನೇ ಪುಟ.

ಯೇಸುವು ಒಬ್ಬ ವ್ಯಕ್ತಿಯ ಸಾವು ಮತ್ತು ಪುನರುತ್ಥಾನದ ನಡುವಿನ ಪರಿಸ್ಥಿತಿಯನ್ನು ಪ್ರಜ್ಞೆತಪ್ಪಿ ಮಾಡುವ ನಿದ್ರೆಗೆ ಹೋಲಿಸಿದ್ದಾನೆ (ಯೋಹಾನ 11:11,14). ಆದರೆ ರಕ್ಷಣೆ ಹೊಂದಿದವರು ಮತ್ತು ರಕ್ಷಣೆ ಕಳಕೊಂಡವರು ಎರಡೂ ಗುಂಪಿನವರು ಪುನರುತ್ಥಾನವಾದ ಮೇಲೆ ತಮ್ಮ ತಮ್ಮ ಪ್ರತಿಫಲವನ್ನು ಪಡೆದುಕೊಳ್ಳುತ್ತಾರೆ (ಯೋಹಾನ 5:28,29). ನಾವು ಸಾವು ಬಂದಾಗ ಅದನ್ನು ಸ್ವೀಕರಿಸಲು ಯಾವಾಗಲೂ ಸಿದ್ಧವಾಗಿರುವುದು ಅತ್ಯಾವಶ್ಯಕ ಎಂಬುದನ್ನು ಎತ್ತಿ ತೋರಿಸುತ್ತಾನೆ.

ಸತ್ತುಹೋದ ನಿಮ್ಮ ಪ್ರಿಯ ಬಂಧುಗಳು ಈವಾಗ ದಿಟವಾಗಿಯೂ ವಿಶ್ರಾಂತಿಯಲ್ಲಿದ್ದಾರೆ ಎಂದು ತಿಳಿದಾಗ ನಿಮಗೆ ಎಂಥಾ ಆದರಣೆ ನೀಡುತ್ತದೆ?

**ಗುರುವಾರ** **ಸೆಪ್ಟೆಂಬರ್ 23**

## ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ

ಈಗ ಬಂದಿರುವ ಮೊಬೈಲ್ ಸೆಟ್‌ಗಳು ಅನೇಕ ಆಪ್‌ಗಳನ್ನು ಹೊಂದಿವೆ. ಅವುಗಳಲ್ಲಿ 'ಗೂಗಲ್ ನಕ್ಷೆಗಳು' ಬಹಳ ಹೆಚ್ಚಾಗಿ ಬಳಸಲ್ಪಡುವ ಆಪ್‌ಗಳಲ್ಲಿಒಂದು ಈ ಸೌಲಭ್ಯ ಬರುವುದಕ್ಕೆ ಮುಂಚೆ ನಾವು ಒಂದು ಸ್ಥಳಕ್ಕೆ (ವಿಳಾಸಕ್ಕೆ) ಮುಟ್ಟಲು ಎಷ್ಟು ಕಷ್ಟಪಡುತ್ತಿದ್ದೆವು ಎಂಬುದನ್ನು ಅನೇಕರು ನೆನಪಿಸಿಕೊಳ್ಳುವುದಿಲ್ಲ. ಈವಾಗ ಈ ಗೂಗಲ್ ನಕ್ಷೆಗಳನ್ನು ಬಳಸಿಕೊಂಡು ಯಾವುದೆ ಅಪರಿಚಿತ ಸ್ಥಳಕ್ಕೆ ವಿಶ್ವಾಸ ಪೂರ್ಣವಾಗಿ ಹುಡುಕದೆ ತಡಕಾಡದೆ ಸುಲಭವಾಗಿ ತಲುಪುತ್ತೇವೆ. ದೇವರು ನಮಗೆ ತನ್ನ ಪ್ರವಾದನೆಯ ವೇಳಾ ಪಟ್ಟಿಯ ಪ್ರಕಾರ ನಮಗೆ ಕೊಂಡುವಂತಹ ವಿಶ್ರಾಂತಿಯ ವಿಷಯದಲ್ಲಿ ನಿದರ್ಶನ ಎನಿಸುವಷ್ಟು ವಿಶ್ವಾಸಪೂರ್ಣರಾಗಿದ್ದೇವೆಯೇ?

ಕೆಲವು ಸಲ ನಾವು ತಪ್ಪಾದ ವಿಳಾಸವನ್ನು ಆ್ಯಪ್‌ನಲ್ಲಿ ಒತ್ತಿ ಬಿಟ್ಟಿರುತ್ತೇವೆ ಅಥವಾ ಅದು ತೋರಿಸುವ ದಿಕ್ಕಿನಲ್ಲಿ ಹೋಗದೆ ನಮಗೆ ಹತ್ತಿರ ದಾರಿ ಗೊತ್ತು ಎಂದುಕೊಳ್ಳುತ್ತೇವೆ. ಎರಡೂ ಸಂದರ್ಭಗಳಲ್ಲಿ ನಾವು ತಲುಪಬೇಕಾದ ಸ್ಥಳವನ್ನು

ತಲುಪಲಾರದೆ ಹೋಗಬಹುದು, ಅಂತಹ ಸಂದರ್ಭಗಳಲ್ಲಿ ನಮ್ಮ ಮನಸ್ಥಿತಿ ಖಂಡಿತವಾಗಿ ಶಾಂತಿಯನ್ನು ಕಳೆದುಕೊಳ್ಳುತ್ತದೆ.

ಫಿಲಿಪ್ಪಿ 4:4–6 ವಚನಗಳನ್ನು ಓದಿರಿ. ನೋವು ಹಿಂಸೆಗಳು ತುಂಬಿದ ಈ ಲೋಕದ ಮಧ್ಯೆದಲ್ಲಿ ನಿಜವಾದ ವಿಶ್ರಾಂತಿ, ನಿಜವಾದ ಸಮಾಧಾನ ಹೊಂದಿಕೊಳ್ಳುವ ರೀತಿಯ ಬಗ್ಗೆ ಪೌಲನು ಏನು ಹೇಳುತ್ತಾನೆ?

ಈ ವಚನಗಳಲ್ಲಿ ಪೌಲನು ನಮ್ಮ ಎಲ್ಲಾ ಶೋಧನೆಗಳಲ್ಲಿ ಯಾವಾಗಲೂ ಸಂತೋಷ ಪಡಬೇಕೆಂದು ಹೇಳುತ್ತಾ ಇಲ್ಲ, ಬದಲಿಗೆ "ನೀವು ಯಾವಾಗಲೂ ಕರ್ತನಲ್ಲಿ ಸಂತೋಷಿಸಿರಿ" ಎಂಬುದಾಗಿ ಹೇಳುತ್ತಾನೆ. ನಮ್ಮ ವರ್ತಮಾನದ ಪರಿಸ್ಥಿತಿ ಹೇಗೇ ಇರಲಿ, ನಾವು ಎಂಥಾ ಶೋಧನೆಗಳನ್ನಾದರೂ ಎದುರಿಸುತ್ತಿರಲಿ ನಾವು ದೇವರ ಒಳ್ಳೆಯತನ, ಪ್ರೀತಿ ಮತ್ತು ಆತನು ಶಿಲುಬೆಯ ಮೇಲೆ ತೋರಿಸಿದ ತ್ಯಾಗ ಇವುಗಳಲ್ಲಿ ನೆಲೆಗೊಂಡರೆ ನಾವು ಆತನಲ್ಲಿ ಸಂತೋಷಿಸಬಹುದು ಮತ್ತು ದಣಿದು ಹೋದ ನಮ್ಮ ಆತ್ಮಗಳಿಗೆ ಬೇಕಾದ ಶಾಂತಿ ಸಮಾಧಾನ ಹೊಂದಿಕೊಳ್ಳ–ಬಹುದು.

ಈ ವಚನಗಳಲ್ಲಿನ ವಿಶ್ರಾಂತಿ, ಸಮಾಧಾನ ಮತ್ತು ಗ್ರಹಿಕೆಯನ್ನು ಮೀರುವ ಶಾಂತಿ ನಿರೀಕ್ಷೆಗಳನ್ನು ಸೂಚಿಸುವ ದನಿಯನ್ನೇ ಕೇಳುತ್ತೇವೆ.

ನಾವು ದಿಟವಾಗಿಯೂ ಯಾವುದಕ್ಕೂ ಆತಂಕಪಟ್ಟುಕೊಳ್ಳದಿದ್ದರೆ ಯಾವ ತೆರನಾದ ವಿಶ್ರಾಂತಿಯನ್ನು ನಮ್ಮ ಆತ್ಮಗಳಿಗೆ ಹೊಂದಿಕೊಳ್ಳಬಹುದು ಎಂಬುದನ್ನು ಕಲ್ಪನೆ ಮಾಡಿಕೊಳ್ಳಿರಿ. ಇದು ವಾಸ್ತವವಾಗಿ ಈ ಲೋಕದಲ್ಲಿ ಸಾಧ್ಯವಿಲ್ಲ ಎನಿಸಬಹುದು (ಪೌಲನಿಗೂ ಬಹಳ ಚಿಂತೆಗಳಿದ್ದವು), ಆದರೆ ಪ್ರೀತಿಸ್ವರೂಪನಾದ ದೇವರು ಅಂತಿಮವಾಗಿ ಎಲ್ಲವನ್ನೂ ನಿಯಂತ್ರಿಸುತ್ತಾನೆ. ನಮ್ಮನ್ನು ರಕ್ಷಿಸಿ ತನ್ನ ರಾಜ್ಯಕ್ಕೆ ಸೇರಿಸುತ್ತಾನೆ ಎಂಬ ತಿಳುವಳಿಕೆಯು ನಾವು ಯಾವ ವಿಷಯದಲ್ಲೂ ಆತಂಕಪಟ್ಟುಕೊಳ್ಳದೆ ಸರಿಯಾದ ದೃಷ್ಟಿಯನ್ನು ಹೊಂದಿಕೊಳ್ಳಲು ಸಹಾಯ ಮಾಡುತ್ತದೆ.

ಕ್ರಿಸ್ತನ ಬರೋಣ ಬಹಳ ಹತ್ತಿರವಾಗಿದೆಯಲ್ಲವೇ? ಹೌದು, ಆತನು ನಮಗೆ ಬಹಳ ಹತ್ತಿರವಾಗಿದ್ದಾನೆ, ನಾವು ನಮ್ಮ ಕಣ್ಣುಗಳನ್ನು ಮುಚ್ಚುತ್ತಿದ್ದಂತೆ ನಾವು

ಮತ್ತೆ ಕಣ್ಣು ತೆರೆದಾಗ ನಾವು ಕಾಣುವುದು ಕ್ರಿಸ್ತನ ಪ್ರತ್ಯಕ್ಷತೆಯನ್ನು. ನಿಸ್ಸಂದೇಹವಾಗಿ, ಈ ಜೀವನವು ಕಳವಳಗಳಿಂದ, ಶೋಧನೆಯಿಂದ ಮತ್ತು ಹೋರಾಟಗಳಿಂದ ತುಂಬಿಕೊಂಡಿದೆ. ನಾವ್ಯಾರು ಇವುಗಳನ್ನು ತಪ್ಪಿಸಿಕೊಳ್ಳಲಾರೆವು; ಅಪೋಸ್ತಲನಾದ ಪೌಲನೂ ಸಹ (2 ಕೊರಿಂಥ 11). ಆದಾಗ್ಯೂ ಇವುಗಳ ಮಧ್ಯೆದಲ್ಲೂ ನಾವು ಎಲ್ಲವನ್ನು ಈವಾಗ ತಾಳಿಕೊಳ್ಳಬೇಕು ಎಂದು ಹೇಳುವುದೇ ಪೌಲನ ಉದ್ದೇಶವಾಗಿದೆ, ಹಾಗಾದರೆ, ಖಂಡಿತವಾಗಿಯೂ ಕ್ರಿಸ್ತನಲ್ಲಿ ನಮಗೆ ಕೊಡಲ್ಪಟ್ಟಿರುವುರಲ್ಲಿ ಸಂತೋಷಿಸಬಹುದು ಮತ್ತು ನಮ್ಮ ಆತ್ಮಗಳಿಗೆ ಬೇಕಾದ ವಿಶ್ರಾಂತಿಯನ್ನು ಈಗಲೂ ಕಂಡುಕೊಳ್ಳಬಹುದು.

ಫಿಲಿಪ್ಪಿ 4:4–6 ವಚನಗಳನ್ನು ಮತ್ತೆ ಓದಿರಿ. ನೀವು ಯಾವುದೇ ಶೋಧನೆಗಳಲ್ಲಿ ಕಷ್ಟಸಂಕಟಗಳಲ್ಲಿ ಸಿಲುಕಿಕೊಂಡಿದ್ದರೂ ಈ ಅದ್ಭುತವಾದ ವಾಕ್ಯಗಳನ್ನು ನಿಮ್ಮ ಅನುಭವಕ್ಕೆ ಈಗಲೇ ತಂದುಕೊಳ್ಳಲು ಯಾವ ರೀತಿಯಲ್ಲಿ ನಿಮಗೆ ಅನ್ವಯ ಮಾಡಿಕೊಳ್ಳುವಿರಿ?

**ಶುಕ್ರವಾರ** **ಸೆಪ್ಟೆಂಬರ್ 24**

**ಹೆಚ್ಚಿನ ಚಿಂತನೆ :** ನಾವು ಯಾವಾಗಲೂ ನಮ್ಮ ಪ್ರಾರ್ಥನೆಗಳಿಗೆ ನೇರವಾಗಿ ತಕ್ಷಣದಲ್ಲಿ ಉತ್ತರ ಸಿಗಬೇಕೆಂದು ಬಯಸುತ್ತೇವೆ. ಒಂದು ವೇಳೆ ಹಾಗಾಗದೆ ತಡವಾದರೆ ಅಥವಾ ಇನ್ನೊಂದು ರೂಪದಲ್ಲಿ ಅದು ದೊರಕಿದರೆ ನಾವು ಬಹಳವಾಗಿ ಅಧೈರ್ಯಪಟ್ಟುಕೊಳ್ಳುತ್ತೇವೆ. ಆದರೆ ದೇವರು ನಮಗೆ ಸರಿಯಾದ ಸಮಯದಲ್ಲಿ ಸರಿಯಾದ ರೀತಿಯಲ್ಲಿ ನಮ್ಮ ಪ್ರಾರ್ಥನೆಗಳಿಗೆ ಉತ್ತರ ಕೊಡುವಷ್ಟು ಜ್ಞಾನಿಯೂ ಒಳ್ಳೆಯವನೂ ಆಗಿದ್ದಾನೆ. ನಮ್ಮ ಎಲ್ಲಾ ಆಸೆಗಳು ಪೂರೈಸಿದಾಗ ಆಗುವುದಕ್ಕಿಂತ ಹೆಚ್ಚಿನದನ್ನು ಮತ್ತು ಉತ್ತಮವಾದುದನ್ನು ಮಾಡುವವನಾಗಿದ್ದಾನೆ. ನಾವು ಯಾವಾಗಲೂ ಆತನ ಪ್ರೀತಿ ಮತ್ತು ಜ್ಞಾನದಲ್ಲಿ ಭರವಸವುಳ್ಳವರಾಗಿರುವುದರಿಂದ ಆತನು ನಮ್ಮ ಇಷ್ಟವನ್ನು ಒಪ್ಪಿಕೊಳ್ಳಬೇಕು ಎಂದು ಕೇಳಬಾರದು. ಆದರೆ ಆತನ ಉದ್ದೇಶ ನೆರವೇರಲಿ ಎಂಬುದಾಗಿ ಬಯಸಬೇಕು. ನಮ್ಮೆಲ್ಲಾ ಆಸೆ, ಆಕಾಂಕ್ಷೆಗಳೆಲ್ಲಾ ಆತನ ಚಿತ್ತದಲ್ಲಿ ಕಳೆದುಹೋಗಬೇಕು". ಶ್ರೀಮತಿ ಎಲೆನ್ ಜಿ ವೈಟಮ್ಮನವರ Gospel workers ಪುಸ್ತಕದ 219ನೇ ಪುಟ.

ಯೇಸುಕ್ರಿಸ್ತನು ತನ್ನ ಮಕ್ಕಳನ್ನು ರಕ್ಷಿಸಲು ಮತ್ತು ಅವರಿಗೆ ಅಮರತ್ವದ ಅಂತಿಮ ಸ್ಪರ್ಶವನ್ನು ನೀಡಲು ಬರುವುದಕ್ಕೆ ಮೊದಲು ಕೊಂಚ ಸಮಯ ಮಾತ್ರವಿರುತ್ತದೆ.... ಸಮಾಧಿಗಳು ತೆರೆಯಲ್ಪಡುತ್ತವೆ, ಸತ್ತವರು ಜಯಶಾಲಿಗಳಾಗಿ ಏಳುತ್ತಾರೆ, ಆವಾಗ "ಓ ಮರಣವೇ ನಿನ್ನ ವಿಷದ ಕೊಂಡಿ ಎಲ್ಲಿ? ಸಮಾಧಿಯೇ ಓ ನಿನ್ನ ಜಯವೆಲ್ಲಿ?" ಎಂದು ಕೇಳುತ್ತಾರೆ. ಕ್ರಿಸ್ತನಲ್ಲಿ ನಿದ್ರೆ ಹೊಂದಿದ ನಮ್ಮ ಪ್ರಿಯರು ಅಮರತ್ವವನ್ನು ಧರಿಸಿಕೊಂಡು ಮುಂದೆ ಬರುವರು" – ಶ್ರೀಮತಿ ಎಲೆನ್ ಜಿ ವೈಟಮ್ಮನವರ Counsels on Stewardship ಪುಸ್ತಕದಲ್ಲಿ 350ನೇ ಪುಟ.

## ಚರ್ಚಿಸಬೇಕಾದ ಪ್ರಶ್ನೆಗಳು

1. ಮಹಾಹೋರಾಟದ ವಾಸ್ತವತೆಯ ಬಗ್ಗೆ ಆಲೋಚಿಸಿರಿ. ಇದು ಪ್ರಪಂಚದಲ್ಲಿ ಆಡಲ್ಪಡುತ್ತಿದೆ ಎಂಬುದನ್ನು ಹೇಗೆ ಕಾಣುವಿರಿ? ನಿಮ್ಮ ವೈಯಕ್ತಿಕ ಜೀವನದಲ್ಲಿ ಇದನ್ನು ಕಂಡಿರುವಿರಾ? ಇದು ಖಂಡಿತವಾಗಿಯೂ ವಾಸ್ತವವಾದುದು ಅಲ್ಲವೇ? ಸತ್ಯವೇನೆಂದರೆ ಇದು ಬಹಳವಾಗಿ ಬಹಳ ಜನರು ಯೋಚಿಸುವುದಕ್ಕಿಂತ ವಾಸ್ತವವಾದುದಾಗಿದೆ, ಯಾಕೆಂದರೆ ಅನೇಕರು ಪಿಶಾಚನು ಇದ್ದಾನೆಂಬುದಾಗಿ ನಂಬುವುದಿಲ್ಲ. ನಮ್ಮ ಲೋಕದ ಪರಿಸ್ಥಿತಿಯು ಯಾಕೆ ಹೀಗಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಮಹಾಹೋರಾಟದ ವಾಸ್ತವತೆಯನ್ನು ಅರ್ಥಮಾಡಿಕೊಳ್ಳುವುದು ಮುಖ್ಯವಾಗಿದೆ ಏಕೆ? ಈ ಮಹಾ ಹೋರಾಟವು ಹೇಗೆ ಮುಕ್ತಾಯವಾಗುತ್ತದೆ ಎಂಬ ತಿಳುವಳಿಕೆಯು ನಮಗೆ ಬಹಳ ಆದರಣೆಯನ್ನು ನೀಡುತ್ತದೆ ಏಕೆ?

2. ನಾವು ಪ್ರವಾದನೆಯಲ್ಲಿ ಏನು ಸ್ಪಷ್ಟವಾಗಿ ಪ್ರಕಟಗೊಂಡಿದೆಯೋ ಅದನ್ನು ಮೀರಿ ಇಲ್ಲಸಲ್ಲದ್ದನ್ನು ಭಾವಿಸಿಕೊಂಡರೆ ಅದರಿಂದ ನಾವು ದಾರಿ ತಪ್ಪುತ್ತೇವೆ. ಇನ್ನೂ ಸಂಭವಿಸಿಲ್ಲದ ಅನೇಕ ಘಟನೆಗಳ ಬಗ್ಗೆ ಗೊತ್ತಿಲ್ಲದ್ದನ್ನು ಭಾವಿಸಿಕೊಂಡು ಅಥವಾ ಇತರರನ್ನು ನಂಬಿಕೊಂಡು ನಮ್ಮ ಸಭೆಯ ಸಭಿಕರು ಬಹಳ ಸಲ ಸಮಸ್ಯೆಗೆ ಸಿಲುಕಿದ್ದಾರಲ್ಲವೇ? ಅಂಥಾ ಉರುಲಿಗೆ (ಬಲೆಗೆ) ಸಿಲುಕದ ಹಾಗೆ ನಾವು ನಮ್ಮನ್ನು ಹೇಗೆ ಸಂರಕ್ಷಿಸಿಕೊಳ್ಳಬಹುದು?

3. ಸಬ್ಬತ್ತು ಶಾಲೆಯ ತರಗತಿಯಲ್ಲಿ ಪ್ರಕಟನೆ 14:9–11 ವಚನಗಳನ್ನು ಓದಿರಿ

ಮತ್ತು ಮೃಗವನ್ನೂ ಅದರ ವಿಗ್ರಹವನ್ನು ಆರಾಧಿಸುವವರಿಗೆ ವಿಶ್ರಾಂತಿ ಸಿಗಲಾರದ ಬಗ್ಗೆ ಪ್ರಶ್ನಿಸಿರಿ. ಅದರ ಅರ್ಥವೇನಾಗಿದೆ?

4. ಸಭೆಯಲ್ಲಿ ವಿವಾದಿತವಾದ ವಿಷಯವು ನಾವು ಯಾವ ಪಾತ್ರವನ್ನು ವಹಿಸುತ್ತೇವೆ ಎಂಬುದಕ್ಕೆ ಸಂಬಂಧಪಡುತ್ತದೆಯೇ ಹೊರತು ಕ್ರಿಸ್ತನ ಹಿಂದಿರುವಿಕೆಯ ಗಳಿಗೆಗೆ (ಸಮಯಕ್ಕೆ) ಸಂಬಂಧಪಡುವುದಿಲ್ಲ. ಈ ವಿಷಯದಲ್ಲಿ ಯಾವುದೇ ಸ್ಥಾನವನ್ನು ಹೊಂದಿದ್ದರೂ ನಾವು ಲೋಕಕ್ಕೆ ಆತನ ಬರೋಣದ ಸಂದೇಶವನ್ನು ಹರಡುವುದರಲ್ಲಿ ಸಕ್ರಿಯ ಪಾತ್ರವನ್ನು ವಹಿಸುವುದು ಇನ್ನೂ ಬಹಳ ಮುಖ್ಯವಾಗಿದೆ ಏಕೆ?